# ಪದ್ಯ ಭಾಗ-೮ ರಾಮಧಾನ್ಯ ಚರಿತೆ

**ಕೃತಿಕಾರರ ಪರಿಚಯ:**

**ಕನಕದಾಸ** : ಇವರ ಮೊದಲ ಹೆಸರು ತಿಮ್ಮಪ್ಪನಾಯಕ. ಇವರು ಕ್ರಿ.ಶ. ೧೫೦೮ ರಲ್ಲಿ ಹಾವೇರಿ ಜಿಲ್ಲೆಯ ಬಾಡ ಗ್ರಾಮದಲ್ಲಿ ಜನಿಸಿದರು. ಇವರ ತಂದೆ **ಬೀರಪ್ಪ** ಹಾಗೂ ತಾಯಿ **ಬಚ್ಚಮ್ಮ**. ಇವರ ಆರಾಧ್ಯ ದೈವ ಹಾಗೂ ಅಂಕಿತನಾಮ **ಕಾಗಿನೆಲೆ ಆದಿಕೇಶವ.**

ಇವರು ರಚಿಸಿರುವ ಕೃತಿಗಳು: ಹರಿಭಕ್ತಿಸಾರ, ರಾಮಧಾನ್ಯ ಚರಿತೆ, ಮೋಹನ ತರಂಗಿಣಿ, ನಳಚರಿತ್ರೆ. ಇವಲ್ಲದೆ ನೂರಾರು ಕೀರ್ತನೆಗಳು, ಉಗಾಭೋಗ, ಸುಳಾದಿಗಳು ಮತ್ತು ಮಂಡಿಗೆಗಳನ್ನು ರಚಿಸಿದ್ದಾರೆ

ಡಾ. ಸಾ.ಶಿ.ಮರುಳಯ್ಯ ಅವರು ಸಂಪಾದಿಸಿರುವ ಕನಕದಾಸರ ಕಾವ್ಯಭಾಗ-೧ ಕೃತಿಯಿಂದ ಆಯ್ಕೆಮಾಡಿಕೊಳ್ಳಲಾಗಿದೆ.

**ಅ] ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

**೧. ದೇಶಕೆ ಅತಿಶಯವಾದ ಧಾನ್ಯ ಯಾವುದು?**

**ಉತ್ತರ:** ದೇಶಕೆ ಅತಿಶಯವಾದ ಧಾನ್ಯ 'ರಾಗಿ' (ನರೆದಲೆಗ).

**೨. ವ್ರಿಹಿ ಯಾರ ಬಾಯಿಗೆ ತುತ್ತು ಎಂದು ಹೇಳಿದೆ?**

**ಉತ್ತರ:** ವ್ರಿಹಿ ಹೆಣದ ಬಾಯಿಗೆ ತುತ್ತು ಎಂದು ಹೇಳಿದೆ.

**೩. ದಾಶರಥಿ ಎಂದರೆ ಯಾರು?**

**ಉತ್ತರ:** ದಾಶರಥಿ ಎಂದರೆ ಶ್ರೀರಾಮ.

**೪. ನರೆದಲೆಗ ಯಾರನ್ನು ಆದರಿಸಿ ಸಲಹುತ್ತದೆ?**

**ಉತ್ತರ:** ನರೆದಲೆಗ ಬರಗಾಲದಲ್ಲಿ ಆಹಾರವಿಲ್ಲದೆ ಸಾಯುವ ಪ್ರಾಣಿಗಳನ್ನು ಆದರಿಸಿ ಸಲಹುತ್ತದೆ.

**೫. ಹರಿಹರ ವಿರಂಚಿಗಳನ್ನು ಏತಕ್ಕಾಗಿ ಅಯೋಧ್ಯೆಗೆ ಕರೆಸಲಾಗುತ್ತದೆ?**

**ಉತ್ತರ:** ನರೆದಲೆಗ(ರಾಗಿ) ಮತ್ತು ವ್ರೀಹಿ(ಭತ್ತ) ಇವುಗಳಲ್ಲಿ ಯಾರು ಶ್ರೇಷ್ಠ ಎಂಬ ವಿವಾದವನ್ನು ಬಗೆಹರಿಸಲು ಹರಿಹರ ವಿರಂಚಿಗಳನ್ನು ಅಯೋಧ್ಯೆಗೆ ಕರೆಸಲಾಗುತ್ತದೆ.

**೬. ಸೆರೆಗೆ ಯಾರು ಯಾರನ್ನು ಹಾಕಲಾಗುತ್ತದೆ?**

**ಉತ್ತರ:** ಸೆರೆಗೆ ನರೆದಲೆಗ ಮತ್ತು ವ್ರೀಹಿಯನ್ನು ಹಾಕಲಾಗುತ್ತದೆ.

**ಆ]ಕೊಟ್ಟಿರುವ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

**೧. ಶ್ರೇಷ್ಠವೆಂದು ಹೇಳಲಾಗಿರುವ್ ಧಾನ್ಯಗಳಾವುವು?**

**ಉತ್ತರ:** ಕೆಲವರು ಗೋಧಿಯನ್ನು, ಸಾಮೆಯನ್ನು, ನವಣೆಯನ್ನು, ಕಂಬನ್ನು, ಜೋಳವನ್ನು ಶ್ರೇಷ್ಠವೆಂದು ಹೇಳಿದರೆ, ಮತ್ತೆ ಕೆಲವರು ಭತ್ತವನ್ನೂ ಮತ್ತು ಹಲವರು ರಾಗಿಯನ್ನು ಶ್ರೇಷ್ಠವೆಂದು ಹೇಳಿದರು.

**೨.ಗೌತಮರು ನರೆದಲೆಗನೆ ಶ್ರೇಷ್ಠವೆನ್ನಲು ವ್ರಿಹಿಯು ಹೇಳಿದ್ದೇನು?**

**ಉತ್ತರ:** ಗೌತಮರು ನರೆದಲೆಗನೆ ಶ್ರೇಷ್ಠವೆನ್ನಲು ವ್ರಿಹಿಯು ಗೌತಮ ಮುನಿಗೆ ಹೀಗೆ ಹೇಳುತ್ತದೆ: "ಎಲ್ಲಾ ಧರ್ಮಗಳ ಸಾರ ನಿಮಗೆ ತಿಳಿದಿದೆ. ನಿಮಗೆ ಎಲ್ಲರ ಬಗ್ಗೆ ತಿಳಿದಿಲ್ಲವೇ? ಹೀಗಿದ್ದೂ ಇಲ್ಲಿ ಈ ರೀತಿ ಕಡೆಗಣಿಸಿ ಮಾತನಾಡುವುದು ಸರಿಯೇ? ಸಾಕು. ಅದು ಹಾಗಿರಲಿ, ಭತ್ತ ನಾನಿರುವಾಗ; ಗೋದಿ ಮೊದಲಾದ ಧಾನ್ಯಗಳೆಲ್ಲಾ ಇಲ್ಲಿರುವಾಗ ಇವರಲ್ಲಿ ರಾಗಿಯೇ ಶ್ರೀಮಂತ(ಶ್ರೇಷ್ಠ/ಬಲ್ಲಿದ) ಎಂದು ಹೇಳುವುದು ಇದು ಯಾವ ನ್ಯಾಯ?" ಎಂದಿತು.

**೩. ವ್ರಿಹಿಯನ್ನು ಯಾವ ಯಾವ ಮಂಗಳ ಕಾರ್ಯಗಳಲ್ಲಿ ಬಳಸಲಾಗುತ್ತದೆ?**

**ಉತ್ತರ:** ವ್ರಿಹಿಯನ್ನು ಬ್ರಾಹ್ಮಣರ ಉಪ'ನಯನದಲ್ಲಿ, ವ್ರತಾಚರಣೆಯಲ್ಲಿ, ಒಳ್ಳೆಯ ಭೋಜನದಲ್ಲಿ, ಶ್ರೇಷ್ಠವಾದ ಮಂತ್ರಾಕ್ಷತೆಯಲ್ಲಿ, ಶುಭ ಸಮಾರಂಭಗಳಲ್ಲಿ, ಆರತಿಗೆ ಹಿರಿಯರಲ್ಲಿ, ಯಜ್ಞಯಾಗಾದಿಗಳಲ್ಲಿ(ಕ್ರತು), ಅರಮನೆಯಲ್ಲಿ ಹಾಗೂ ದೇವರಿಗೆ ಅತಿಶಯವಾದ ನೈವೇದ್ಯದಲ್ಲಿ ಬಳಸಲಾಗುತ್ತದೆ.

**೪. ನರೆದಲೆಗನು ವ್ರಿಹಿಯನ್ನು ಏನೆಂದು ಹೀಯಾಳಿಸಿತು?**

**ಉತ್ತರ:** ನರೆದಲೆಗನು ವ್ರಿಹಿಗನನ್ನು "ನೀನು ಸತ್ಯಹೀನನಾಗಿರುವೆ, ಬಡವರನ್ನು ಕಣ್ಣೆತ್ತಿ ನೋಡುವುದಿಲ್ಲ, ಶ್ರೀಮಂತರನ್ನು ಮಾತ್ರ ಹಿಂಬಾಲಿಸಿ ಹೋಗುವ ಅಪೇಕ್ಷೆ ನಿನ್ನದು. ಹೆತ್ತ ಬಾನಂತಿಯರು ಹಾಗೂ ರೋಗಿಗಳಿಗೆ ನೀನು ಪತ್ಯವಾಗಿರುವೆ ಅಲ್ಲದೆ ಹೆಣದ ಬಾಯಿಗೆ ತುತ್ತಾಗುವೆ. ನಿನ್ನ ಜನ್ಮ ವ್ಯರ್ಥವಾದುದು." ಎಂದು ರಾಗಿ ಭತ್ತವನ್ನು ಹೀಯಾಳಿಸಿತು.

**೫. ಶ್ರೀರಾಮನು ಧಾನ್ಯಗಳ ವಿಚಾರದಲ್ಲಿ ಕೈಗೊಂಡ ತೀರ್ಮಾನವೇನು?**

**ಉತ್ತರ:** ಶ್ರೀರಾಮನು ಅಲ್ಲಿ ನೆರೆದಿದ್ದ ಧಾನ್ಯಗಳ ವಾದವಿವಾದಗಳನ್ನು ಗಮನಿಸಿದ ಮೇಲೆ ಹೀಗೆ ತೀರ್ಪು ನೀಡಿದನು. 'ಶ್ರೇಷ್ಠವಾದ ಧಾನ್ಯಗಳಲ್ಲಿ ವ್ರಿಹಿ ಮತ್ತು ನರೆದಲೆಗನೇ ಇರಲಿ. ಆರು ತಿಂಗಳು ಸೆರೆಯಲ್ಲಿ ಹಾಕಿದರೆ; ಹಿರಿದು ಕಿರಿದೆಂದು ವಾದಿಸುವ ಇವರ ಪೌರುಷವನ್ನು ತಿಳಿಯಬಹುದು. ಇನ್ನು ನಾವು ಅಯೋಧ್ಯಾ ಪಟ್ಟಣಕ್ಕೆ ಹೋಗುತ್ತೇವೆ. ಆ ನಂತರ ನಿಮ್ಮ ಸ್ಥಿತಿಯನ್ನು ಗಮನಿಸಿ ಕರೆಸಿಕೊಳ್ಳುತ್ತೇವೆ." ಎಂದು ಹೇಳಿ ಅಯೋಧ್ಯಾ ಪಟ್ಟಣಕ್ಕೆ ಹೋದನು.

**ಇ] ಕೆಳಗಿನ ಪ್ರಶ್ನೆಗಳಿಗೆ ಏಳು-ಎಂಟು ವಾಕ್ಯಗಳಲ್ಲಿ ಉತ್ತರಿಸಿ.**

**೧. ಶ್ರೀರಾಮನು ನರೆದಲೆಗ ಹಾಗೂ ವ್ರಿಹಿಯನ್ನು ಸೆರಮನೆಗೆ ಹಾಕಲು ಕಾರಣವೇನು?**

**ಉತ್ತರ:** ಶ್ರೀರಾಮನು ವನವಾಸದಿಂದ ಹಿಂದಿರುಗಿ ಬರುವಾಗ ಗೌತಮ ಮುನಿಗಳ ಆಶ್ರಮದಲ್ಲಿ ಭೋಜನದ ನಂತರ ವಿವಿಧ ಭಕ್ಷ್ಯಗಳ ರುಚಿಯ ಬಗ್ಗೆ ಚರ್ಚೆ ನಡೆಯುತ್ತದೆ. ಆಗ ಹನುಮಂತನು ಧಾನ್ಯದ ಸತ್ವವನ್ನು ನೋಡಿ ಶ್ರೇಷ್ಠತೆಯನ್ನು ನಿರ್ಧರಿಸಬೇಕೆನ್ನುತ್ತಾನೆ. ಆಗ ಗೌತಮ ಮುನಿಗಳು ಹಲವು ಧಾನ್ಯಗಳನ್ನು ತರಿಸುತ್ತಾರೆ. ಆಗ ಚರ್ಚೆ ಆರಂಭವಾಗುತ್ತದೆ. ಕೆಲವರು ಗೋಧಿಯನ್ನು, ಕೆಲವರು ಸಾಮೆಯನ್ನು, ಕೆಲವರು ನವಣೆಯನ್ನು, ಕೆಲವರು ಕಂಬನ್ನು, ಕೆಲವರು ಜೋಳವನ್ನು ಶ್ರೇಷ್ಠವೆಂದು ಹೇಳಿದರೆ, ಮತ್ತೆ ಕೆಲವರು ಭತ್ತವನ್ನೂ ಮತ್ತು ಕೆಲವರು ರಾಗಿಯನ್ನು ಶ್ರೇಷ್ಠವೆಂದು ಹೇಳುತ್ತಾರೆ. ಆಗ ಗೌತಮರು ನರೆದಲೆಗನೇ ಶ್ರೇಷ್ಠ ಎನ್ನುತ್ತಾರೆ. ಆದರೆ ವ್ರಿಹಿಗನು (ಭತ್ತ) ಆ ಮಾತನ್ನು ಒಪ್ಪದೆ ತಾನೇ ಶ್ರೇಷ್ಠವೆಂದೂ ಬ್ರಾಹ್ಮಣರ ಉಪ'ನಯನದಲ್ಲಿ, ವ್ರತಾಚರಣೆಯಲ್ಲಿ, ಭೋಜನದಲ್ಲಿ, ಮಂತ್ರಾಕ್ಷತೆಯಲ್ಲಿ, ಶುಭ ಸಮಾರಂಭಗಳಲ್ಲಿ

ಮುಂತಾದ ಕಾರ್ಯಗಳಲ್ಲಿ ತನ್ನನ್ನು ಬಳಸಲಾಗುತ್ತದೆ. ಆದ್ದರಿಂದ ತಾನೇ ಶ್ರೇಷ್ಠ ಎಂದು ಹೇಳುತ್ತದೆ".

ಆಗ ನರೆದಲೆಗ "ಈ ಜಗತ್ತಿಗೆಲ್ಲ ತಿಳಿದಿರುವಂತೆ; ಮಳೆ ಹೋಗಿ, ಬೆಳೆ ಇಲ್ಲದಂತಾಗಿ, ಘೋರ ಬರಗಾಲದಲ್ಲಿ ಅನ್ನವಿಲ್ಲದೆ ನಾಶವಾಗುವ ಪ್ರಾಣಿಗಳನ್ನು ನಾನು ಆದರಿಸಿ ಕಾಪಾಡುತ್ತೇನೆ. ಎಲವೋ ಆಗ ನೀನೆಲ್ಲಿರುವೆಯೋ ನಿನ್ನ ಬಳಗ ಎಲ್ಲಿರುವುದೋ" ಎಂದು ಹೇಳುತ್ತದೆ. ಹೀಗೆ ಅವರಿಬ್ಬರ ನಡುವೆ ತೀವ್ರ ವಾದ-ವಿವಾದ ನಡೆಯುತ್ತದೆ. ಅವರ ವಾದವನ್ನು ನಿಲ್ಲಿಸಲು ಸಾಧ್ಯವಾಗದಿದ್ದಾಗ ಶ್ರೀರಾಮನು "ಆರು ತಿಂಗಳು ಇವರಿಬ್ಬರನ್ನು ಸೆರೆಯಲ್ಲಿ ಹಾಕಿದರೆ; ಹಿರಿದು ಕಿರಿದೆಂದು ವಾದಿಸುವ ಇವರ ಪೌರುಷವನ್ನು ತಿಳಿಯಬಹುದು." ಎಂದು ಹೇಳಿ ಅವರನ್ನು ಸೆರೆಗೆ ಹಾಕುತ್ತಾನೆ.

**೨. ನರೆದಲೆಗ ಹಾಗೂ ವ್ರಿಹಿಗಳ ನಡುವೆ ನಡೆದ ಸಂವಾದವನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.**

**ಉತ್ತರ:**

**ಈ] ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.**

**೧. "ನಮ್ಮಯ ದೇಶಕತಿಶಯ ನರೆದಲೆಗ"**

**ಆಯ್ಕೆ:** ಈ ವಾಕ್ಯವನ್ನು ಕನಕದಾಸರು ಬರೆದಿರುವ 'ರಾಮಧಾನ್ಯ ಚರಿತೆ' ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಈ ಮಾತನ್ನು ಗೌತಮ ಮುನಿಗಳು ಶ್ರೀರಾಮನಿಗೆ ಹೇಳುತ್ತಾರೆ. "ನಮ್ಮ ದೇಶದಲ್ಲಿ ಶ್ರೇಷ್ಠವೆಂದರೆ ರಾಗಿಯೇ ಸರಿ. ಇವನು ಶಕ್ತಿ(ಸತ್ವ) ಹೊಂದಿರುವವನು. ಉಳಿದ ಧಾನ್ಯಗಳೇಕೆ?" ಎಂದು ಈ ಸಂದರ್ಭದಲ್ಲಿ ಹೇಳುತ್ತಾರೆ.

**ಸ್ವಾರಸ್ಯ:** ಸತ್ವಯುತವಾದದ್ದು ರಾಗಿ ಹಾಗೂ ರಾಗಿಯನ್ನೇ ಪ್ರಧಾನ ಆಹಾರವಾಗಿ ಬಳಸುವ ಶ್ರಮಿಕವರ್ಗ ಎಂಬುದನ್ನು ಇಲ್ಲಿ ಕನಕದಾಸರು ಸ್ವಾರಸ್ಯಪೂರ್ಣವಾಗಿ ಪ್ರತಿಪಾದಿಸಿದ್ದಾರೆ.

**೨. "ಕುಲಹೀನ ನೀನು ಪ್ರತಿಷ್ಠ ಸುಡು ಮತಿಹೀನ ನೀನು"**

**ಆಯ್ಕೆ:** ಈ ವಾಕ್ಯವನ್ನು ಕನಕದಾಸರು ಬರೆದಿರುವ 'ರಾಮಧಾನ್ಯ ಚರಿತೆ' ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಈ ಮಾತನ್ನು ವ್ರಿಹಿಗನು ನರೆದಲೆಗನಿಗೆ ಹೇಳುತ್ತಾನೆ. ಗೌತಮರು ರಾಗಿ (ನರೆದಲೆಗ) ಶ್ರೇಷ್ಠ ಎಂಬ ಮಾತನ್ನು ಕೇಳಿ ಕೋಪಗೊಂಡ ವ್ರಿಹಿಗ ನರೆದಲೆಗನಿಗೆ "ಭಗವಂತನೇ ನಮ್ಮಿಬ್ಬರಲ್ಲಿ ಯಾರು ಹೆಚ್ಚು, ಯಾರು ಕಡಿಮೆ ಎಂಬುದನ್ನು ಬಲ್ಲನು. ಜಾನಕಿಯ ಪತಿಯಾದ ಶ್ರೀ ರಾಮನ ಸನಿಹದಲ್ಲಿ ನೀನು ಕುಲಹೀನ, ಅಹಂಕಾರಿ, ಬುದ್ಧಿಗೇಡಿ" ಎಂದು ಈ ಸಂದರ್ಭದಲ್ಲಿ ಹೀಯಾಳಿಸುತ್ತದೆ.

**ಸ್ವಾರಸ್ಯ:** ಕೆಳವರ್ಗದ ಮೇಲೆ ಮೇಲ್ವರ್ಗದ ಶೋಷಣೆ ಈ ಮಾತಿನಲ್ಲಿ ವ್ಯಕ್ತವಾಗಿರುವುದು ಸ್ವಾರಸ್ಯವಾಗಿದೆ.

**೩. "ವಿಲಯಕಾಲದೊಳನ್ನವಿಲ್ಲದೆ ಅಳಿವ ಪ್ರಾಣಿಗಳಾಧರಿಸಿ ಸಲಹುವೆ"**

**ಆಯ್ಕೆ:** ಈ ವಾಕ್ಯವನ್ನು ಕನಕದಾಸರು ಬರೆದಿರುವ 'ರಾಮಧಾನ್ಯ ಚರಿತೆ' ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಈ ಮಾತನ್ನು ವ್ರಿಹಿಗನು ನರೆದಲೆಗನನ್ನು ಹೀಯಾಳಿಸಿದಾಗ ನರೆದಲೆಗನು ವ್ರಿಹಿಯನ್ನು ಕುರಿತು ಈ ಮಾತನ್ನು ಹೇಳುತ್ತದೆ. "ಈ ಜಗತ್ತಿಗೆಲ್ಲ ತಿಳಿದಿರುವಂತೆ; ಮಳೆ ಹೋಗಿ, ಬೆಳೆ ಇಲ್ಲದಂತಾಗಿ, ಘೋರ ಬರಗಾಲದಲ್ಲಿ ಅನ್ನವಿಲ್ಲದೆ ನಾಶವಾಗುವ ಪ್ರಾಣಿಗಳನ್ನು ನಾನು ಆದರಿಸಿ ಕಾಪಾಡುತ್ತೇನೆ. ಎಲವೋ ಆಗ ನೀನೆಲ್ಲಿರುವೆಯೋ ನಿನ್ನ ಬಳಗ ಎಲ್ಲಿರುವುದೋ" ಎಂದು ಈ ಸಂದರ್ಭದಲ್ಲಿ ಹೇಳುತ್ತದೆ.

**ಸ್ವಾರಸ್ಯ:** ಬರಗಾಲದಲ್ಲಿ ಎಲ್ಲರನ್ನು ಸಂರಕ್ಷಿಸುವ ರಾಗಿಯ ಮಹತ್ವ ಇಲ್ಲಿ ಸ್ವಾರಸ್ಯಕರವಾಗಿ ವ್ಯಕ್ತವಾಗಿದೆ.

**೪. "ಇವರಿರಲಿ ಸೆರೆಯೊಳಗಾರು ತಿಂಗಳು"**

**ಆಯ್ಕೆ:** ಈ ವಾಕ್ಯವನ್ನು ಕನಕದಾಸರು ಬರೆದಿರುವ 'ರಾಮಧಾನ್ಯ ಚರಿತೆ' ಎಂಬ ಕೃತಿಯಿಂದ ಆರಿಸಿಕೊಳ್ಳಲಾಗಿರುವ **'ರಾಮಧಾನ್ಯ ಚರಿತೆ'** ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಈ ಮಾತನ್ನು ಶ್ರೀರಾಮನು ವ್ರಿಹಿಗ ಮತ್ತು ನರೆದಲೆಗನ ವಿವಾದವನ್ನು ಬಗೆಹರಿಸುವ ಬಗ್ಗೆ ಸಭೆಯನ್ನು ಕುರಿತು ಈ ಮಾತನ್ನು ಹೇಳುತ್ತಾನೆ. ರಾಗಿ ಮತ್ತು ಭತ್ತ ಇವೆರಡರ ವಾದವಿವಾದಗಳನ್ನು ಆಲಿಸಿದ ರಾಮನು ಅವರಿಬ್ಬರ ಸತ್ವ ತಿಳಿಯಬೇಕಾದರೆ ಆರು ತಿಂಗಳು ಸೆರೆಗೆ ಹಾಕಬೇಕೆಂದು ಈ ಸಂದರ್ಭದಲ್ಲಿ ತೀರ್ಮಾನಿಸುತ್ತಾನೆ.

**ಸ್ವಾರಸ್ಯ:** ರಾಗಿ ಮತ್ತು ಭತ್ತ ಇವೆರಡರಲ್ಲಿ ರಾಗಿಯೇ ಶ್ರೇಷ್ಠವೆಂದು ತಿಳಿದಿದ್ದರೂ ಅದನ್ನು ನಿರೂಪಿಸಲು ರಾಮನು ನಸುನಗುತ್ತಾ ಅವುಗಳ ಸತ್ವ ಪರೀಕ್ಷೆಗೆ ಸೆರೆವಾಸ ವಿಧಿಸಿದ್ದು ಸ್ವಾರಸ್ಯಕರವಾಗಿದೆ.

**ಉ] ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ.**

೧. ಪುರಂದರದಾಸರು : ಪುರಂದರವಿಠಲ : : ಕನಕದಾಸರು : **ಕಾಗಿನೆಲೆ ಆದಿಕೇಶವ**

೨. ವ್ರಿಹಿ : ಭತ್ತ : : ನರೆದಲೆಗ : **ರಾಗಿ**

೩. ಬಾಣಂತಿಯರಿಗೆ : ಪಥ್ಯ : : ಹೆಣದ ಬಾಯಿಗೆ : **ತುತ್ತು**

೪. ಕ್ಷಿತಿ : ಭೂಮಿ : : ವಿರಂಚಿ : **ಬ್ರಹ್ಮ**

೫. ಸೆರೆಯೊಳಗೆ : ಆಗಮಸಂಧಿ : : ತಾನೆಲ್ಲಿ : **ಲೋಪಸಂಧಿ**